ಆ) ಇದರಿಂದ ನಗರದ ಸಾರಿಗೆ ಬಸ್ಸುಗಳನ್ನು ಓಡಿಸಲು ತೀರ್ಮಾನಿಸಲಾಗಿದೆಯೇ;

ಇ) ಈ ಹೊಂಗೆ ಎಣ್ಣೆಯನ್ನು ಪೂರೈಸಲು ಯಾರಿಗೆ ಟೆಂಡರ್ ವಹಿಸಲಾಗಿದೆ;

ಈ) ಈ ಎಣ್ಣೆಯಿಂದ ಈಗಾಗಲೇ ಎಷ್ಟು ಬಸ್ಸುಗಳನ್ನು ಓಡಿಸಲಾಗುತ್ತಿದೆ;

ಉ) ಹೊಂಗೆ ಎಣ್ಣೆಯ ಖರೀದಿ ದರ ಎಷ್ಟು ಎಂದು ನಿಗಧಿಪಡಿಸಲಾಗಿದೆ; ಸದರಿ ಎಣ್ಣೆಯಿಂದ ವಾಹನ ಎಷ್ಟು ಕಿ.ಮೀ ಚಲಿಸುವ ಸಾಮರ್ಥ್ಯ ಹೊಂದಿದೆ.

ಊ) ಪರ್ಯಾಯ ಇಂಧನವಾಗಿ ಬಳಸುವ ಈ ಎಣ್ಣೆಯ ಲಭ್ಯತೆ, ಇದರ ವೆಚ್ಚ ಪ್ರತಿದಿನ ಈ ಎಣ್ಣೆಯ ಪೂರೈಕೆ ಇತ್ಯಾದಿ ಸಂಗತಿಗಳ ಬಗ್ಗೆ ವಿವರ ನೀಡುವುದು?

ಶ್ರೀ ಬಿ. ರಮಾನಾಥ್ ರೈ (ಸಾರಿಗೆ ಸಚಿವರು) :

ಅ) ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೇಯಲ್ಲಿ ಮಾತ್ರ ಪ್ರಯೋಗಾರ್ಥವಾಗಿ ಜೈವಿಕ ಇಂಧನ ಹೊಂಗೆ ಎಣ್ಣೆಯನ್ನು ಬಳಸಲು ರಾಜ್ಯಮಟ್ಟದ ಸಮನ್ವಯ ಸಮಿತಿಯಲ್ಲಿ ಚರ್ಚಿಸಿ ನಿರ್ಧರಿಸಲಾಗಿದೆ.

ಆ) ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಲ್ಲಿ ಮಾತ್ರ ಪ್ರಾಯೋಗಿಕವಾಗಿ ಎರಡು ವಾಹನಗಳನ್ನು ಜೈವಿಕ ಇಂಧನದಿಂದ ಕಾರ್ಯಾಚರಣೆ ಮಾಡಲು ಕ್ರಮ ಕೈಗೊಳ್ಳಲಾಗಿದೆ.

ಇ) ಮೆ: ಗುರು ಎಂಟರ್ ಪ್ರೈಸಸ್, ಗೌರಿಬಿದನೂರು ಇವರಿಗೆ ವಹಿಸಲಾಗಿದೆ.

ಈ) ಎರಡು ಬಸ್ಸುಗಳನ್ನು ಪ್ರಾಯೋಗಿಕವಾಗಿ ಕಾರ್ಯಾಚರಣೆ ಮಾಡಲಾಗುತ್ತಿದೆ.

ಉ) ಸದರಿ ಎಣ್ಣೆಯ ಬೆಲೆ ಪ್ರತಿ ಲೀಟರಿಗೆ ರೂ. 23.50 ಆಗಿರುತ್ತದೆ. ಸದರಿ ಎಣ್ಣೆಯಿಂದ ವಾಹನ ಪ್ರತಿ ಲೀಟರಿಗೆ ಸರಾಸರಿ 4.87 ಕಿ.ಮೀ ಚಲಿಸುವ ಸಾಮರ್ಥ್ಯ ಹೊಂದಿದೆ.

ಊ) ಹೊಂಗೆ ಎಣ್ಣೆ ಲಭ್ಯತೆ, ವೆಚ್ಚ ಹಾಗೂ ಪೂರೈಕೆ ಇತ್ಯದಿ ಸಂಗತಿಗಳ ಬಗ್ಗೆ ದೀರ್ಘವಾಗಿ ಅಭ್ಯಸಿಸಲು ರಾಜ್ಯದ ಪರಿಸರ ನಿರ್ವಹಣೆ ಮತ್ತು ಕಾರ್ಯನೀತಿ ಸಂಶೋಧನೆ ಸಂಸ್ಥೆ, ಬೆಂಗಳೂರು ಇವರಿಗೆ ವಹಿಸಲಾಗಿದೆ.

ರಾಜ್ಯ ಸರ್ಕಾರ ಆನ್ ಲೈನ್ ಲಾಟರಿಯನ್ನು ನಿಷೇಧಿಸುವ ಬಗ್ಗೆ

71 (203) : ಶ್ರೀ ಸದಾನಂದ ಗೌಡ ಡಿ.ವಿ. (ಪುತ್ತೂರು) ಮಾನ್ಯ ಸಣ್ಣ ಉಳಿತಾಯ, ರಾಜ್ಯ ಲಾಟರಿ, ವಿಮೆ ಹಾಗೂ ಆಗ್ರೋ ಪ್ರೋಸೆಸಿಂಗ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯ ಸರ್ಕಾರದ ಲಾಟರಿ ಹೊರತುಪಡಿಸಿ ಬೇರೆ ಬೇರೆ ರಾಜ್ಯಗಳು ಎಷ್ಟು ಮಾದರಿಯ ಲಾಟರಿಗಳು ರಾಜ್ಯದಲ್ಲಿ ಮರಾಟವಾಗುತ್ತಿವೆ;

ಆ) ಈ ಲಾಟರಿ ಮಾರಾಟಕ್ಕೆ ರಾಜ್ಯ ಸರ್ಕಾರ ಅನುಮತಿ ನೀಡಿದೆಯೇ ಅನುಮತಿಯ ಮಾನದಂಡಗಳೇನು;

ಇ) ಈಗ ರಾಜ್ಯ ಸರ್ಕಾರವು ಸದರಿ ಲಾಟರಿಗಳ (ಆನ್‌ಲೈನ್ ಸೇರಿ) ನಿಷೇಧಕ್ಕೆ ಸೂಚನೆಯನ್ನು ನೀಡಲಾಗಿದೆಯೇ;

ಈ) ಈ ಸೂಚನೆಗೆ ಆ ರಾಜ್ಯಗಳಿಂದ ಬಂದ ಪ್ರತಿಕ್ರಿಯೆ ಏನು;

ಉ) ಸರ್ಕಾರದ ಸೂಚನೆಗಳನ್ನು ಪಾಲಿಸದಿದ್ದಲ್ಲಿ ನಿಷೇಧವನ್ನು ಹೇರಲಾಗುವುದೇ?

ಶ್ರೀ ಬಾಬುರಾವ್ ಬಸವಣ್ಣಪ್ಪ ಚಿಂಚನ್ಸೂರ್ (ಸಣ್ಣ ಉಳಿತಾಯ, ರಾಜ್ಯ ಲಾಟರಿ, ವಿಮೆ ಹಾಗೂ ಆಗ್ರೋ ಪ್ರೋಸೆಸಿಂಗ್ ರಾಜ್ಯ ಸಚಿವರು)

ಅ) ಬೇರೆ ರಾಜ್ಯಗಳ ಸಾಂಪ್ರದಾಯಿಕ ಹಾಗೂ ಗಣಕೀಕೃತ ನೆಟ್‌ವರ್ಕ್ ಲಾಟರಿ ಟಿಕೆಟ್‌ಗಳು ಕರ್ನಾಟಕ ರಾಜ್ಯದಲ್ಲಿ ಮಾರಾಟಗೊಳ್ಳುತ್ತಿವೆ.

ಆ) ಲಾಟರಿ (ರೆಗ್ಯುಲೇಷನ್) ಆಕ್ಟ್ 98ರ ಅನ್ವಯ ಹೊರರಾಜ್ಯಗಳು ಕರ್ನಾಟಕ ರಾಜ್ಯದಲ್ಲಿ ಲಾಟರಿ ನಡೆಸಲು ಪರವಾನಗಿ ಪಡೆಯುವ ಅವಶ್ಯಕತೆ ಇರುವುದಿಲ್ಲ ಆದರೆ ಕರ್ನಾಟಕ ರಾಜ್ಯ ಲಾಟರಿ ನಿಯಮಾವಳಿಗಳು 1999ರ ಅನುಸಾರ ಅವರುಗಳು ಫಾರಂ–II ರಲ್ಲಿ ಮಾಹಿತಿಯನ್ನು ನೀಡಬೇಕು.

ಇ) ಇಲ್ಲ

ಈ) ಉದ್ಭವಿಸುವುದಿಲ್ಲ.

ಉ) ಕರ್ನಾಟಕ ರಾಜ್ಯ ಸರ್ಕಾರವು ಅನಧಿಕೃತ ಲಾಟರಿಗಳನ್ನು ನಿಯಂತ್ರಿಸುವ ಸಲುವಾಗಿ 10.12.2003 ರಿಂದ ಜಾರಿಗೆ ಬರುವಂತೆ ಸುಗ್ರಿವಾಜ್ಞೆ ಹೊರಡಿಸಿ ಕರ್ನಾಟಕ ರಾಜ್ಯ ಲಾಟರಿಯೂ ಸೇರಿ ಎಲ್ಲಾ ಲಾಟರಿಗಳ ಮೇಲೆ ಬೆಟ್ಟಿಂಗ್ (ಲಾಟರಿ) ತೆರಿಗೆಯನ್ನು ವಿಧಿಸಲಾಗಿದೆ. ಪ್ರತಿ ಡ್ರಾಗೆ ರೂ 1 ಲಕ್ಷ ಹಾಗೂ ಬಂಪರ್ ಡ್ರಾಗಳಿಗೆ ರೂ. 1.5 ಲಕ್ಷ ತೆರಿಗೆ ಮೊತ್ತವನ್ನು ನಿಗದಿಪಡಿಸಿದೆ.

ತಿಪಟೂರು ಕ್ಷೇತ್ರದಲ್ಲಿ ಹೊಸ ವಿದ್ಯುತ್ ಸ್ಥಾವರಗಳು ಮತ್ತು ಟ್ರಾನ್ಸ್‌ಫಾರ್ಮರ್‌ಗಳ ದುರಸ್ತಿ ಬಗ್ಗೆ

72 (111) : ಶ್ರೀ ಷಡಾಕ್ಷರಿ (ತಿಪಟೂರು) ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತಿಪಟೂರು ವಿಧಾನಸಭಾ ಕ್ಷೇತ್ರದಲ್ಲಿ ಎರಡು ವಿದ್ಯುತ್ ಸ್ಥಾವರಗಳು ಮಂಜೂರಾತಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಸ್ಥಾವರಗಳ ಕಾಮಗಾರಿಯನ್ನು ಯಾವಾಗ ಕೈಗೆತ್ತಿಕೊಳ್ಳಲಾಗುವುದು;

ಇ) ತಿಪಟೂರು ಉಪವಿಭಾಗದ ತಿಪಟೂರು ನಗರದಲ್ಲಿ ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳನ್ನು ದುರಸ್ತಿ ಕೇಂದ್ರವನ್ನು ತೆರೆಯುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಈ) ಹಾಗಿದ್ದಲ್ಲಿ ಯಾವಾಗ ಪ್ರಾರಂಭ ಮಾಡಲಾಗುವುದು?

ಶ್ರೀ ಬಸವರಾಜ್ ಪಾಟೀಲ್ (ಇಂಧನ ರಾಜ್ಯ ಸಚಿವರು) :

ಅ) ಹೌದು, ಬಂದಿರುತ್ತದೆ. ತಿಪಟೂರು ತಾಲ್ಲೂಕಿನ ಬಂಡಿಹಳ್ಳಿ ಮತ್ತು ಹುಣಸೆಘಟ್ಟ ಗ್ರಾಮಗಳಲ್ಲಿ ತಲಾ ಒಂದು 110 ಕೆ.ವಿ. ವಿದ್ಯುತ್ ಸಬ್‌ಸ್ಟೇಷನ್‌ಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ. ಈ ಸ್ಥಾವರಗಳ ನಿರ್ಮಾಣಕ್ಕೆ ಬೇಕಾಗುವ ಭೂಮಿಯನ್ನು ಸ್ವಾಧೀನಪಡಿಸಿಕೊಂಡು ಮುಳ್ಳು ತಂತಿ ಬೇಲಿಯನ್ನು ಹಾಕಲಾಗಿದೆ.

ಆ) ಈ ಸಬ್ – ಸ್ಟೇಷನ್‌ಗಳ ಸ್ಥಾಪನೆಯ ಪ್ರಸ್ತಾವನೆಯನ್ನು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ತಾಂತ್ರಿಕ ಸಲಹಾ ಸಮಿತಿಯ ಅನುಮೋದನೆಗಾಗಿ ಮಂಡಿಸಲಾಗುವುದು. ತಾಂತ್ರಿಕ ಸಲಹಾ ಸಮಿತಿಯ ಅನುಮೋದನೆ ಪಡೆದ ನಂತರ ಈ ಕಾಮಗಾರಿಯ ಅಂದಾಜು ಪಟ್ಟಿ, ವಿವರವಾದ ಯೋಜನಾ ವರದಿ, ಆಡಳಿತಾತ್ಮಕ ಮಂಜೂರಾತಿ ಹಾಗೂ ಆರ್ಥಿಕ ವ್ಯವಸ್ಥೆಯಾದ